ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.

**ಸಿ.ಸಿ.ನಂ: 1568/2025**

**ದಿನಾಂಕ: 21 ನೇ ಜುಲೈ, 2026**

ಫಿರ್ಯಾದಿಃ 1) ಕರ್ನಾಟಕ ಸರ್ಕಾರ

ವಿರುದ್ಧ

ಆರೋಪಿತಃ 1) ಸಿದ್ದಪ್ಪ ಕಲ್ಲಪ್ಪಾ ಗಡಕರಿ
ವಯಸ್ಸುಃ 39 ವರ್ಷ, ಸಾಃ ವಿಜಯನಗರ,
ತಾಃ ಚಿಕ್ಕೋಡಿ, ಜಿಃ ಬೆಳಗಾವಿ.

2) ಕಲ್ಲಪ್ಪಾ ಗಟಗೆಪ್ಪಾ ಗಡಕರಿ,
ವಯಸ್ಸುಃ 65 ವರ್ಷ, ಸಾಃ ವಿಜಯನಗ,
ತಾಃ ಚಿಕ್ಕೋಡಿ, ಜಿಃ ಬೆಳಗಾವಿ.

ಆಪಾದನೆ

ನಾನು ಜಹೀರ ಅತನೂರ್, ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ., ಪ್ರಭಾರ ಪಧಾನ ದಿವಾಣಿ ನ್ಯಾಯಲಯ ಚಿಕ್ಕೋಡಿ, ನಿಮ್ಮ ಮೇಲೆ ಈ ಆಪಾದನೆಯನ್ನು ಹೊರೆಸುವುದೇನೆಂದರೇ,

ದಿನಾಂಕಃ 24-08-2025 ರಂದು ಮಧ್ಯಾಹ್ನ 12-00 ಗಂಟೆ ಸುಮಾರಿಗೆ ಈ ನ್ಯಾಯಾಲಯ ಸ್ಥಳ ಸೀಮೆಯ ಚಿಕ್ಕೋಡಿ ಪೊಲೀಸ ಠಾಣಾ ಹದ್ದಿ ಪೈಕಿ ವಿಜಯನಗರದ ಕೆಂಪಣ್ಣಾ ಶಿವರಾಯಿ ಕುರಣೆ ರವರ ಮನೆ ಹತ್ತಿರ ಕಬ್ಬೂರ ಪಟ್ಟಣ (ಮುಲ್ಲಾನಕೊಡಿ) ಜೋಡಟ್ಟಿ ರಸ್ತೆ ಮೇಲೆ ಮೊದಲನೇ ಆರೋಪಿಯಾದ ನೀವು ನಿಮ್ಮ ಬಳಿ ವಾಹನ ನಡೆಸಲು ಪರವಾನಗಿ ಪತ್ರ ಇರುವುದಿಲ್ಲ ಎಂದು ತಿಳಿದಿದ್ದರೂ ಸಹ ನಿಮ್ಮ ಸುರಕ್ಷತೆಯ ಸಲುವಾಗಿ ತಲೆಗೆ ಹೆಲ್ಮೇಟ ಧರಿಸದೇ ಹಾಗೂ ರಸ್ತೆಯ ಪರಿಸ್ಥಿತಿ ಕಡೆಗೆ ಗಮನ ಕೊಡದೇ ಬಿಳಿ ಬಣ್ಣದ ಹಿರೋ ಕಂಪನಿ ಸ್ಪೇಂಡರ ಪ್ಲಸ ಮೋಟಾರ ಸೈಕಲ ನಂ.ಕೆಎ-23-ಎಕ್ಸ-4550 ನೇದ್ದನ್ನು ಕುರಣೆರವರ ಜಮೀನದ ಕಚ್ಚ ರಸ್ತೆಯಿಂದ ಮುಲ್ಲಾನಕೊಡಿ ಕಡೆಗೆ ನಡೆಯಿಸಿಕೊಂಡು ಹೋಗಿ ಮುಲ್ಲಾನಕೊಡಿ ಕಡೆಯಿಂದ ಜೋಡಟ್ಟಿ ಕಡೆಗೆ ಇಬ್ಬರು ಹಿಂಬದಿದ ಸವಾರರನ್ನು ಕೂಡ್ರಿಸಿಕೊಂಡು ಹೋಗುತ್ತಿದ್ದ ಮೂರನೇ ಆರೋಪಿ ನಡೆಸುತ್ತಿದ್ದ ನೀಲಿ ಬಣ್ಣದ ಬಜಾಜ ಕಂಪನಿ ಸಿಟಿ 100 ಮೋಟಾರ ಸೈಕಲ್ ನಂ.ಕೆಎ-23-ಯು-4919 ನೇದ್ದಕ್ಕೆ ಹಾಯಿಸಿ ಅಪಘಾತ ಮಾಡಿ ಆತನ ಬಲಗಾಲ ತೊಡೆಗೆ ಎಡಗಾಲ ಪಾದಕ್ಕೆ ಭಾರಿ ಗಾಯಪಡಿಸಿದ್ದಲ್ಲದೇ ಮೋಟಾರ ಸೈಕಲ್ ಹಿಂದೆ ಕುಳಿತ ಪಿರ್ಯಾದಿಯ ಬಲಗಾಲಿಗೆ ಸಹಾ ಭಾರಿ ಗಾಯಪಡಿಸಿ ಅಪಘಾತದ ಸಂಗತಿಯನ್ನು ಪೋಲೀಸ ಠಾಣೆಗೆ ತಿಳಿಸದೇ ನಿಮ್ಮ ಮೋಟಾರ ಸೈಕಲ್ನನ್ನು ಓಡಿಸಿಕೊಂಡು ಹ ◌ೋಗಿರುತ್ತಿರಿ ಆ ಮೂಲಕ ಒಂದನೆಯ ಆರೋಪಿಯಾದ ನೀವು ಭಾ.ನ್ಯಾ.ಸಂಹಿತೆ ಕಲಂ 281,

125(ಬಿ) ಬಿ.ಎನ್.ಎಸ್. ಕಾಯಿದೆಯನ್ವಯ ಹಾಗೂ ಕಲಂ 3 ಸಹ ಕಲಂ 181, 194(ಡಿ), 134 ಸಹ ಕಲಂ 187 ರನ್ವಯ ಮೋಟಾರ ವಾಹನ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ

ಎರಡನೆಯ ಆರೋಪಿಯಾದ ನೀವು ನಿಮ್ಮ ಮಾಲೀಕತ್ವದ ಸದರಿ ಬಿಳಿ ಬಣ್ಣದ ಹಿರೋ ಕಂಪನಿ ಸ್ಪ್ಲೇಂಡರ ಪ್ಲಸ ಮೋಟಾರ ಸೈಕಲ ನಂ.ಕೆಎ-23-ಎಕ್ಸ-4550 ನೇದ್ದಕ್ಕೆ ಹಿಂದಿನ ಗಾಲಿ ತೆಗೆದು ಕಬ್ಬಿಣದ ಟ್ರೇಲರ್ ಜೋಡಿಸಿ ಮಾರ್ಪಾಡು ಮಾಡಿ ನೀಲಿ ಬಣ್ಣ ಹಚ್ಚಿ ಮೋಟಾರ್ ಸೈಕಲ್ ನೊಂದಣಿ ನವೀಕರಿಸದೇ ಹಾಗೂ ವಾಯು ಮಾಲಿನ್ಯ ಪ್ರಮಾಣ ಪತ್ರ ಹೊದದೇ ಹಾಗೂ ವಿಮಾ ಪಾಲಿಸಿ ಇರುವುದಿಲ್ಲಾ ಅಂತಾ ಗೊತ್ತಿದ್ದರೂ ಸಹ ಮತ್ತು ವಾಹನ ಚಾಲನಾ ಪರವಾನಗಿ ಇಲ್ಲದ ಒಂದನೇ ಆರೋಪಿತನಿಗೆ ನಡೆಸಲು ಕೊಟ್ಟು ಅಪಘಾತ ಪಡಿಸಿ ಆ ಮೂಲಕ ಕಲ 5 ಸಹಕಲಂ 180 ಹಾಗೂ 146 ಸಹ ಕಲಂ 196, 190(2), 182(4), ಮತ್ತು 39(1) ಸಹ ಕಲಂ 192(1) ರನ್ವಯ ಮೋಟಾರು ವಾಹನ ಕಾಯಿದೆಯ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ಸದರಿ ಮೇಲ್ಕಂಡ ಆಪಾದನೆ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತದೆ.

ಸದರಿ ಆಪಾದನೆ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ 1) ಸದರಿ ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೆ ?

ಉತ್ತರಃ ಆರೋಪಿ ನಂ.1
ಆರೋಪಿ ನಂ.2

ಪ್ರಶ್ನೆ 2) ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೊ?

ಉತ್ತರಃ ಆರೋಪಿ ನಂ.1
ಆರೋಪಿ ನಂ.2

(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ನಂತರ ಆರೋಪಿ ರವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ದೃಡೀಕರಿಸಿದೆ)

( ಜಹೀರ ಅತನೂರ್, )
ಪ್ರಭಾರ ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಧೀಶರು,
ಚಿಕ್ಕೋಡಿ.